International Journal of Kannada Research 2017; 3(1): 151-154

International Journal of Kannada Research
www.kannadajournal.com

ISSN: 2454–5813
IJSR 2017; 3(1): 151-154
© 2017 IJKS
www.kannadajournal.com
Received: 15-11-2016
Accepted: 16-12-2016

**ಡಾ.ಆರ್.ಬಿ.ಕೊಕಟನೂರ**
ಇತಿಹಾಸ ಸಹಾಯಕ ಪ್ರಾಧ್ಯಾಪಕರು,
ಶ್ರೀ ಶ್ರೀಪಾದಬೋಧ ಸ್ವಾಮಿಜಿ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಮೂಡಲಗಿ.
(ಕರ್ನಾಟಕ)

**Correspondence**
**ಡಾ.ಆರ್.ಬಿ.ಕೊಕಟನೂರ**
ಇತಿಹಾಸ ಸಹಾಯಕ ಪ್ರಾಧ್ಯಾಪಕರು,
ಶ್ರೀ ಶ್ರೀಪಾದಬೋಧ ಸ್ವಾಮಿಜಿ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಮೂಡಲಗಿ.
(ಕರ್ನಾಟಕ)

# ಶಾಸನಗಳಲ್ಲಿ ರಾಯಬಾಗ: ಭೌಗೋಳಿಕ ಹಾಗೂ ರಾಜಕೀಯ ಹಿನ್ನಲೆಯಲ್ಲಿ

**ಡಾ.ಆರ್.ಬಿ.ಕೊಕಟನೂರ**

**ಸಾರಾಂಶ**
ಕೂಹುಂಡಿ–3000 ನಾಡಿನ ಆಡಳಿತದ ಉಪ ಕೇಂದ್ರವಾಗಿದ್ದ ಈ ಪಟ್ಟಣ ಸಹಜ ನಿಸರ್ಗ ಸೌಂದರ್ಯದಿಂದ ಕೂಡಿದೆ. ಸೂತ್ತಲೂ ಬೆಟ್ಟಗಳನ್ನು, ಸರ್ವಧರ್ಮ ಸಮನ್ವಯತೆ ಪ್ರತಿಬಿಂಬಿಸುವ ದೇವಾಲಯಗಳನ್ನು, ರಾಜಕೀಯ ಪರಂಪರೆಯನ್ನು ಪ್ರತಿಬಿಂಬಿಸುವ ಶಾಸನಗಳನ್ನು, ಪ್ರಾಚೀನ ಕಾಲದ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ವೀರಗಲ್ಲುಗಳನ್ನು, ಕಲ್ಯಾಣಿ ಚಾಲುಕ್ಯ ವಾಸ್ತುಶಿಲ್ಪವನ್ನು ಪ್ರತಿನಿಧಿಸುವ ದೇವಾಲಯಗಳನ್ನು, ಜ್ಞಾನ ಪ್ರಸಾರಕ್ಕಾಗಿ ಘಟಿಕಾಸ್ಥಾನ, ಅಗ್ರಹಾರವನ್ನು ಹೊಂದಿದ್ದ ಈ ಪಟ್ಟಣವು ಕನ್ನಡ ಸಾರಸ್ವತ ಲೋಕಕ್ಕೆ ರಾಜಾದಿತ್ಯನಂತಹ ಶ್ರೇಷ್ಠತಮ ಕವಿ ಹಾಗೂ ಗಣಿತಜ್ಞನ್ನು ನೀಡಿದೆ. ಈ ಪಟ್ಟಣವು ಕುಮಾರ ಕೀರ್ತಿ ಪಂಡಿತ ದೇವರಂತಹ ಶೇಷ್ಠ ಮುನಿಗಳ ಆವಾಸ ಸ್ಥಾನವಾಗಿತ್ತು. ಈ ಪಟ್ಟಣವು ಬದಾಮಿ ಚಲುಕ್ಯರ, ರಾಷ್ಟ್ರಕೂಟರ, ಕಾಲ್ಯಾಣಿ ಚಾಲುಕ್ಯರ, ಸುಗಂಧವರ್ತಿ (ಇಂದಿನ ಸವದತ್ತಿ) ರಟ್ಟರ, ವಿಜಾಪೂರದ ಆದಿಲ್‌ಶಾಹಿಗಳ, ವಿಜಯನಗರದ ಅರಸರ, ಮರಾಠರ ನಂತರ ಬ್ರಿಟಿಷ್‌ರ ಆಡಳಿತಕ್ಕೊಳಟ್ಟಿತ್ತು. ಇದೆಲ್ಲವನ್ನು ಈ ಪಟ್ಟಣಕ್ಕೆ ಸಂಬಂಧಿಸಿದ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ರಾಯಬಾಗದ ಸ್ಥಳನಾಮ, ಭೌಗೋಳಿಕ ಹಾಗೂ ರಾಜಕೀಯ ಇತಿಹಾಸವನ್ನು ರಚಿಸುವದೇ ಈ ಲೇಖನದ ಉದ್ದೇಶವಾಗಿದೆ.

**ಪ್ರಮುಖ ಪದಗಳು:** ಸ್ಥಳನಾಮ, ಭೌಗೋಳೀಕ, ರಾಜಕೀಯ .

**ಪೀಠಿಕೆ**
ಕರ್ನಾಟಕದ ಇತಿಹಾಸದಲ್ಲಿ ಬೆಳಗಾವಿ ಜಿಲ್ಲೆ ಐತಿಹಾಸಿಕ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಜಿಲ್ಲೆಯಲ್ಲಿ ದೊರೆತ ಸುಮಾರು 300ಕ್ಕೂ ಅಧಿಕ ಶಾಸನಗಳು ಈ ವಿಷಯವನ್ನು ಪುಷ್ಠಿಕರಿಸುತ್ತವೆ. ಅದರಂತೆ ಬೆಳಗಾವಿ ಜಿಲ್ಲೆಯ ಹತ್ತು ತಾಲೂಕುಗಳು ಸಹ ಅಷ್ಟೇ ಐತಿಹಾಸಿಕ ಹಿನ್ನಲೆಯನ್ನು ಹೊಂದಿರುವ ಕೇಂದ್ರಗಳಾಗಿವೆ. ಅವುಗಳಲ್ಲಿ ಬೆಳಗಾವಿ ಜಿಲ್ಲೆಯ ಉತ್ತರ ಮಧ್ಯ ಭಾಗದಲ್ಲಿರುವ ರಾಯಬಾಗ ಪಟ್ಟಣವೂ ಸಹ ಒಂದು. ಇದು ಜಿಲ್ಲಾ ಕೇಂದ್ರದಿಂದ ಉತ್ತರಕ್ಕೆ ಸುಮಾರು 96 ಕೀ.ಮಿ. ದೂರದಲ್ಲಿದೆ. ಪ್ರಸ್ತುತ ಪಟ್ಟಣ ಕಿ.ಶ.ಸುಮಾರು 9ನೆಯ ಶತಮಾನದಿಂದ 13ನೆಯ ಶತಮಾನದವರೆಗೆ ಕರ್ನಾಟಕದ ಇತಿಹಾಸದಲ್ಲಿ ವೈಭವದ ಶಿಖರದಲ್ಲಿದ್ದ ಇತಿಹಾಸ ಪ್ರಸಿದ್ದ ಕೂಹುಂಡಿ ಮೂರು ಸಾವಿರ ನಾಡಿನ ಪ್ರಮುಖ ಉಪ ಆಡಳಿತ ವಿಭಾಗವಾಗಿ ಶೈಕ್ಷಣಿಕ ಹಾಗೂ ಧಾರ್ಮಿಕ ಕೇಂದ್ರವಾಗಿತ್ತು. ಶಾಸನಗಳು "ಬಾಗೆ", "ಪೂವಿನ ಬಾಗಿ", "ತೆಂಕಲು ಬಾಗಿ", "ದಕ್ಷಿಣದ ವಾರಣಾಸಿ" ಎಂದು ಹಾಗೂ ಮರಾಠರ ಆಡಳಿತದಿಂದ "ರಾಯರ ಬಾಗಿ" ಎಂದು ಕರೆಯಲ್ಪಡುವ ರಾಯಬಾಗ ಪ್ರಸ್ತುತ ತನ್ನಲ್ಲಿರುವ ಸುಮಾರು 11 ಶಾಸನಗಳ ಮೂಲಕ ತನ್ನ ಗತವೈಭವವನ್ನು ಸಾರುತ್ತಿದೆ. ಈ ಶಾಸನಗಳು ರಾಯಬಾಗದ ಪ್ರಾಚೀನ ಕಾಲದ ಗತವೈಭವವನ್ನು ಸಾರುವ ರಾಯಭಾರಿಗಳಾಗಿ ಇಂದಿಗೂ ತಮ್ಮ ಕಾರ್ಯ ನಿರ್ವಹಿಸುತ್ತಿವೆ. ಇವುಗಳ ಆಧಾರದ ಮೇಲೆ ಈ ಪಟ್ಟಣದ ಸ್ಥಳನಾಮ, ಭೌಗೋಳಿಕ ಹಾಗೂ ರಾಜಕೀಯ ಇತಿಹಾಸವನ್ನು ರಚಿಸಲು ಪ್ರಯತ್ನಿಸಲಾಗಿದೆ.

**ಸ್ಥಳನಾಮದ ಹಿನ್ನಲೆ**
ಈ ನಾಡಿನ ಸಾಂಸ್ಕೃತಿಕ, ಐತಿಹಾಸಿಕ ಅಧ್ಯಯನಕ್ಕೆ ಗ್ರಾಮಗಳು ಮತ್ತು ಸ್ಥಳ ನಾಮಗಳು ಮಾಹಿತಿ ಒದಗಿಸುವ ಆಕರಗಳಾಗಿವೆ. ಸ್ಥಳನಾಮಗಳ ಅಧ್ಯಯನ ಇತ್ತೀಚಿಗೆ ಗಮನ ಸೆಳೆಯುವ

ಅಧ್ಯಯನವಾಗಿದೆ. ಗ್ರಾಮದ ಹೆಸರುಗಳ ವೈಜ್ಞಾನಿಕ ಅಧ್ಯಯನ ಇಂದು ಬೃಹದ್ಧಾಕಾರವಾಗಿ ಬೆಳೆದು ನಿಂತಿದೆ. ಗ್ರಾಮಗಳಲ್ಲಿ ಹುದುಗಿರುವ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ವಿಶೇಷತೆಯನ್ನು ಗುರುತಿಸುವಲ್ಲಿ ಇದು ಮಹತ್ವದ ಪಾತ್ರ ವಹಿಸುತ್ತದೆ. ಮೊದಲು ಪಾಶ್ಚಿಮಾತ್ಯ ವಿದ್ವಾಂಸರು ಇದರ ಅಧ್ಯಯನ ಪ್ರಾರಂಭಿಸಿದರು. ಕರ್ನಾಟಕದಲ್ಲಿ ಪ್ರಾಗೈತಿಹಾಸಿಕವಾಗಿ ಗ್ರಾಮ ಹೆಸರುಗಳ ವ್ಯವಸ್ಥಿತ ಅಧ್ಯಯನ ಮಾಡಿದ ಕೀರ್ತಿ ಡಾ. ಆರ್.ಸಿ. ಹಿರೇಮಠರಿಗೆ ಸಲ್ಲುತ್ತದೆ. ನಂತರ ಅನೇಕ ವಿದ್ವಾಂಸರು ಇದರ ಅಧ್ಯಯನ ನಡೆಸಿದ್ದಾರೆ.

ಮಾನವ ತನ್ನ ಬದುಕು ಸಾಧ್ಯ ಎಂದು ಯಾವಾಗ ಮನಗಂಡನೊ, ಅಂದು ಊರು, ಗ್ರಾಮ, ಹಳ್ಳಿಗಳು ಉಗಮವಾದವು. ನೆಲದೊಂದಿಗಿನ ಹೋರಾಟದ ಪ್ರಕ್ರಿಯೆಯಲ್ಲಿ ತಾನು ನೆಲೆಗೊಂಡ ಸ್ಥಳದ ಜೊತೆಗೆ ತನ್ನನ್ನು ತಾನು ತೊಡಗಿಸಿಕೊಂಡ ಸಂಕೇತವಾಗಿ ಒಂದು ಹೆಸರನ್ನಿಟ್ಟ. ಅದನ್ನೇ ಸ್ಥಳನಾಮವೆನ್ನು ವರು. ಸ್ಥಳನಾಮವೆಂದರೆ, 'ಇರುವ ಜಾಗಕ್ಕೆ ಇಟ್ಟಿರುವ ಹೆಸರು' ಎಂದರ್ಥ. ಇದಕ್ಕೆ ಇಂಗ್ಲೀಷನಲ್ಲಿ 'TOPONOMY' ಎಂದು ಹೆಸರು. ಇದು ಗ್ರೀಕ್ ಭಾಷೆಯ ಪದ.'TOPO'ಎಂದರೆ, 'ಸ್ಥಳಗಳು' ಎಂದು, 'NOMOS' ಎಂದರೆ, 'ಅಧ್ಯಯನ' ಎಂದರ್ಥ.'TOPONOMY' ಎಂಬುದು 'ಸ್ಥಳನಾಮಗಳ ಅಧ್ಯಯನ' ಎಂದು ಹೇಳಬಹುದು. ಸ್ಥಳ ಎಂದರೆ, 'ಇರುವ ಸ್ಥಾನ' ಅಥವಾ 'ನೆಲೆ' ಎಂದು ಕನ್ನಡ ನಿಘಂಟಿನಲ್ಲಿ ದಾಖಲಾಗಿದೆ. ಅದರಂತೆ ರಾಯಬಾಗಕ್ಕೂ ಅದರದೇ ಆದ ಸ್ಥಳನಾಮ ಐತಿಹ್ಯವಿದೆ.

ಕಲ್ಯಾಣಿ ಚಾಲುಕ್ಯರ ಎರಡನೆಯ ಜಗದೇಕಮಲ್ಲನ ಕ್ರಿ.ಶ.1139ರ ಶಾಸನದಲ್ಲಿ 'ಪೂವಿನಬಾಗೆ' 'ಕುಂತಣಬಾಗೆ' ಎಂದು ಇಂದಿನ ರಾಯಬಾಗನ್ನು ಉಲ್ಲೇಖಿಸಲಾಗಿದೆ.[40] (ಇಂದು ಇದು ಕೊಲ್ಲಾಪೂರ ನಗರದ ಲಕ್ಷ್ಮೀವಿಲಾಸ ಅರಮನೆ ವಸ್ತುಸಂಗ್ರಹಾಲಯದ ಆವರಣದಲ್ಲಿದೆ) ರಾಯಬಾಗದ ಕವಿ ರಾಜಾದಿತ್ಯನು ತನ್ನ ವ್ಯವಹಾರ ಗಣಿತ ಗ್ರಂಥದಲ್ಲಿ :

"ವನತತಿಯಿಂನದಿನದ ಕುಭೃತ್ಕುಲದಿಂಧನಧಾನ್ಯವರ್ಗದಿಂ ।
ಜನಪದ ರಾಜಿಯಿಂಬೆಳೆವಕೆಯ್ವೊಲದಿಂದೆ ಸೆವೊರ್ಗಳಿಂಜಗ ॥
ಜ್ಜನನುತ ಜೈನಧರ್ಮದನೆಗಟ್ಟಿಯೊಳಿಂಬಿನಕೊಂಡಿಮಂಡಲ ।

ಕ್ಕನುಪಮನರತ್ನ ಮಂಡನವೆನಿಪ್ಪುದು ಪೂವಿನಬಾಗೆ ಸಂತತಂ"॥

ಎಂದು ಹೇಳಿದ್ದಾನೆ. 12ನೆಯ ಶತಮಾನದ ತೃಟಿತ ಶಾಸನದಲ್ಲಿ "ಪ್ರಯಾಗ ಬಡಗಲು ತೆಂಕಲು ಬಾಗೆ" ಎಂದು, ಕ್ರಿ.ಶ. 1185ರ ರಟ್ಟರ ಹಣ್ಣಿಕೇರಿ ಶಾಸನದಲ್ಲಿ "ತೆಂಕಲು ಬಾಗಿ" ಎಂದು, ರಾಯಬಾಗದ ಕ್ರಿ.ಶ.1127ರ ಶಾಸನದಲ್ಲಿ "ಶ್ರೀಮನ್ಮಹಾ ಘಟಿಕಾಸ್ನಾ(ಸ್ಥಾ)ನವಗ್ರಹಾರ ಹೂವಿನಬಾಗೆಯ" (ಇಂದು ಇದು ಕೊಲ್ಲಾಪೂರದ ಇರ್ವಿಂಗ ಅಗ್ರಿಕಲ್ಚರಲ್ ಮ್ಯೂಜಿಯಂನಲ್ಲಿದೆ)ಎಂದು, ಸವದತ್ತಿ ರಟ್ಟರ ಕನ್ನಕೈರನ ಶಾಸನದಲ್ಲಿ ರಾಯಬಾಗನ್ನು (ಇಂದು ಇದು ಕೊಲ್ಲಾಪೂರ ನಗರದ ಲಕ್ಷ್ಮೀವಿಲಾಸ ಅರಮನೆ ವಸ್ತುಸಂಗ್ರಹಾಲಯದ ಆವರಣದಲ್ಲಿದೆ) "ಹೂವಿನ ಬಾಗೆ" ಎಂದು ಉದ್ಧರಿಸಿದೆ. ಹೀಗೆ ಶಾಸನಗಳು ಮತ್ತು ಸಾಹಿತ್ತಿಕ ಕೃತಿಗಳು ರಾಯಬಾಗನ್ನು ವಿವಿಧ ಹೆಸರುಗಳಿಂದ ಕರೆದಿವೆ.

ಇಲ್ಲಿದ್ದ ಹೂವಿನ ತೋಟಗಳಿಂದಾಗಿಯೇ ಇದು ಪೂವಿನಬಾಗೆ (ಪೂವು>ಹೂವು, ಬಾಗೆ>ತೋಟ) ಎಂದು ಕರೆಯಲ್ಪಟ್ಟಿದೆ. ತರುವಾಯ ಇದು ಕೊಲ್ಲಾಪುರದ ಶಾಹು ಮಹಾರಾಜರ ಆಡಳಿತದ ಕೇಂದ್ರವಾಗಿತ್ತು. ಅಂತಾಗಿ ಇದು ರಾಯರ+ಬಾಗ=ರಾಯಬಾಗ ಎಂದು ಕರೆಯಲ್ಪಟ್ಟಿದೆ. ಈ ಪಟ್ಟಣದ ಸುತ್ತಮುತ್ತಲಿನ ಜನಸಾಮಾನ್ಯರು ಇದನ್ನು ಬಾಗಿ, ಬಾಗೆ ಎಂತಲೂ ಕರೆಯುತ್ತಾರೆ. ಈ ಪಟ್ಟಣವು ಕಲ್ಯಾಣಿ ಚಾಲುಕ್ಯ ಮತ್ತು ಸವದತ್ತಿಯ ರಟ್ಟ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ಮಹಾಘಟಿಕಾಸ್ಥಾನ ಮತ್ತು ಅಗ್ರಹಾರವಾಗಿತ್ತು. ಪ್ರಸ್ತುತ ಶಾಸನಗಳಲ್ಲಿ ಪೂವಿನ ಬಾಗೆಯು ಕೆರೆಗಳು, ಬಾವಿಗಳು, ಸತ್ರಗಳು, ಅರವಟ್ಟಿಗೆಗಳಿಂದ ಕಂಗೊಳಿಸುತ್ತಿತ್ತೆಂಬ ವರ್ಣನೆಯಿದೆ. ಇದು ಸಸ್ಯವಾಚಿ ಸ್ಥಳನಾಮವಾಗಿದೆ.

**ಭೌಗೋಳಿಕ ಹಿನ್ನಲ್ಲೆ**

ಪ್ರತಿಯೊಂದು ಪ್ರದೇಶ ತಮ್ಮದೇ ಆದ ಭೌಗೋಳಿಕ ಲಕ್ಷಣಗಳನ್ನು ಹೊಂದಿರುತ್ತವೆ. ಆದ್ದರಿಂದಲೇ ಆಡಳಿತ ಸೌಕರ್ಯಕ್ಕಾಗಿ ವಿಭಾಗಗಳನ್ನು ಮಾಡುವಾಗ ನೈಸರ್ಗಿಕ ಅಂಶಗಳನ್ನು ಅವಲಂಬಿಸಿರುವದು ಕಂಡು ಬರುತ್ತದೆ. ಆದ್ದರಿಂದಲೆ ಭೂಗೋಳ ಮತ್ತು ಇತಿಹಾಸದಲ್ಲಿ ಪ್ರಥಮ ಪ್ರಾಶಸ್ತ್ಯ ಯಾವುದಕ್ಕೆ ಎಂಬ ಪ್ರಶ್ನೇ ಬಂದಾಗ ಕಾಂಟ್ "Geography lies at the basis of history" ಎನ್ನುತ್ತಾನೆ. ಅದರಂತೆ ಕೂಹುಂಡಿ ನಾಡಿನ ಪ್ರಮುಖ ಆಡಳಿತ ಕೇಂದ್ರವಾಗಿದ್ದ ರಾಯಬಾಗ ಪಟ್ಟಣವು ಸಹ ನಿಸರ್ಗದತ್ತವಾದ ಭೌಗೋಳಿಕ ಲಕ್ಷಣವನ್ನು ಹೊಂದಿದೆ. ಸಮಶೀತೋಷ್ಣ ವಾತಾವಾರಣದಿಂದ ಕೂಡಿರುವ ಈ ಪಟ್ಟಣದಲ್ಲಿ ಕೆಂಪು ಹಾಗೂ ಕಪ್ಪು ಮಿಶ್ರಿತ ಮಣ್ಣಿನ ಭೂಮಿ ಇದೆ. ಸುಮಾರು 18,560 ಜನಸಂಖ್ಯೆ ಹೊಂದಿರುವ ಈ ಪಟ್ಟಣವು 4.00 ಚ.ಕಿ.ಮೀ ವ್ಯಾಪ್ತಿಯನ್ನು ಹೊಂದಿದೆ. 5200 ಎಕರೆ ಜಮೀನಿದ್ದು, ಬೇಸಿಗೆ ಕಾಲದಲ್ಲಿ $42^{\circ}$ ಸೆಲ್ಸಿಯಸ್ ಹಾಗೂ ಚಳಿಗಾಲದಲ್ಲಿ $18^{\circ}$ ಸೆಲ್ಸಿಯಸ್ ಉಷ್ಣತೆಯನ್ನು ಹೊಂದಿದೆ. 446 ಮೀ.ಮೀ. ವಾರ್ಷಿಕ ಸರಾಸರಿ ಮಳೆಯಾಗುತ್ತದೆ. ಕಬ್ಬು, ಬಾಳೆ, ಗೋವಿನ ಜೋಳ, ಗೋಧಿ, ಸೋಯಾಬಿನ್, ಶೇಂಗಾ, ಹತ್ತಿ, ಎಲೆ ಇಲ್ಲಿನ ಬೆಳೆಗಳಾಗಿವೆ. ರಾಯಬಾಗದಿಂದ ಕೆಲವೇ ಕಿ.ಮಿ. ದೂರದಲ್ಲಿ ಕೃಷ್ಣಾ ನದಿ ಹರಿದಿದೆ. ರೇಲ್ವೆ ನಿಲ್ದಾಣವಿರುವ ಈ ಪಟ್ಟಣ ಆರ್ಥಿಕವಾಗಿ ಸಂಪದ್ಭರಿತವಾಗಿತ್ತು. ರಾಯಬಾಗದ ಕವಿ ಹಾಗೂ ಗಣಿತಜ್ಞ ರಾಜಾದಿತ್ಯನು ತನ್ನ "ವ್ಯವಹಾರ ಗಣಿತ" ಗ್ರಂಥದಲ್ಲಿ ರಾಯಬಾಗದ ಕುರಿತು:

ಪೊಸಪೊಂಗೆದಗೇಜಾಜಿಪಾದರಿಸತ್ಸೇವಂತಿ ನೀಲಾಬ್ಜಮು ।
ದ್ವಸರೋಜಂಸುರಹೊನ್ನೆ ಸಂಪಿಗೆನವೋದ್ಯನ್ಮಲ್ಲಿ ಕಾಪ್ರಸೂ ॥
ನಸಮೂಹಂತನಿಗಂಪನೆಣ್ಣೆಸೆಗೆನಿಚ್ಚಂಬಿಟಲನ್ವರ್ಥಮಾ ।
ಗೆಸೆಗುಂ ಪೂವಿನಬಾಗೆಯೆಂಬ ಪೆಸರಿಂದಿಂಬಾಗಿ ಚೆಲ್ವಾಗಿರಲ್ ॥
ವಿನುತರ್ ನೀತಿವಿದರ್ ಕರ
ಮನುನಯದಿಂದ ದಾನಧರ್ಮ ವಿವಿದಾಕಾರರ್ ॥
ಧನಕನಕ ಸಮ್ಮೃದ್ಧರ್ ಪೂ ।
ವಿನಬಾಗೆಯ ವಿಪ್ರವೈಶ್ಯ ಶೂದ್ರಾದಿಜಂ ॥
ಜಾಗದ ಚಲದ ನೆಗಳ್ತೆಯ ।
ಭೋಗದ ಮಾನ್ಯತೆಯ ಜೈನಮತದ ಮಹತ್ವ ॥
ಕ್ಕಾಗರಮೆನೆಗಾರ್ಹಸ್ಥ್ಯಂ । ಬಾಗೆ ನಿಜಾನ್ವಯದ
ಜನ್ಮಭೂಮಿಯೆನಿಕ್ಕುಂ ॥

ಎಂದು ಪೂವಿನಬಾಗೆಯ ಹಿರಿಮೆಯನ್ನು ಕೊಂಡಾಡಿದ್ದಾನೆ. ಇದೆಲ್ಲವನ್ನು ನೋಡಿದರೆ ರಾಯಬಾಗ ಭೌಗೋಳಿಕವಾಗಿ ಸಂಪದ್ಭರಿತವಾಗಿತ್ತೆಂಬುದರಲ್ಲಿ ಸಂಶಯವಿಲ್ಲ.

**ರಾಜಕೀಯ ಇತಿಹಾಸ.**

| ಅ.ನಂ | ಶಾಸನದ ಕಾಲ | ಸ್ಥಳ | ಅರಸು ಮನೆತನ | ಪ್ರಕಟಣೆ |
|---|---|---|---|---|
| 01 | ಕ್ರಿ.ಶ. 1040 | ರಾಯಬಾಗ | ಸವದತ್ತಿ ರಟ್ಟರು | ಕುಂದಣಗಾರ ಕೆ.ಜಿ. (ಸಂ.), ಇನ್ಸ್‌ಕ್ರಿಫ್‌ಶನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ದಿ ಕೊಲ್ಹಾಪುರ ಸ್ಟೇಟ್ (1939), ಶಾ.ಸಂ. 23. |
| 02 | ಕ್ರಿ.ಶ. 1041 | ರಾಯಬಾಗ | ಕಲ್ಯಾಣಿ ಚಾಳುಕ್ಯ | ಎ.ಆರ್.ಎಸ್.ಆಯ್.ಇ. 1956–57, ಅಪೆಂಡಿಕ್ಸ್ ಬಿ, ಶಾ.ಸಂ. 154. |
| 03 | ಕ್ರಿ.ಶ. 1077 | ರಾಯಬಾಗ | ಕಲ್ಯಾಣಿ ಚಾಳುಕ್ಯ | ಎ.ಆರ್.ಎಸ್.ಆಯ್.ಇ. 1956–57, ಅಪೆಂಡಿಕ್ಸ್ ಬಿ, ಶಾ.ಸಂ. 155. |
| 04 | ಕ್ರಿ.ಶ. 1127 | ರಾಯಬಾಗ | ಕಲ್ಯಾಣಿ ಚಾಳುಕ್ಯ | ಕುಂದಣಗಾರ ಕೆ.ಜಿ. (ಸಂ.), ಇನ್ಸ್‌ಕ್ರಿಫ್‌ಶನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ದಿ ಕೊಲ್ಹಾಪುರ ಸ್ಟೇಟ್ (1939), ಶಾ.ಸಂ. 6. |
| 05 | ಕ್ರಿ.ಶ. 1139 | ರಾಯಬಾಗ | ಕಲ್ಯಾಣಿ ಚಾಳುಕ್ಯ | ದೇಸಾಯಿ ಪಿ.ಬಿ. (ಸಂ.), ಸಮರಿಸ್ ಆಫ್ ಇನ್ಸ್‌ಕ್ರಿಪ್‌ಶನ್ಸ್:1945–46 (1966), ಶಾ.ಸಂ. 18, ಪು. 40–41. |

ಕರ್ನಾಟಕ ಚರಿತ್ರೆಯಲ್ಲಿ ರಾಯಬಾಗ ತನ್ನ ಐತಿಹಾಸಿಕ ಗತವೈಭವದಿಂದ ಗುರುತಿಸಿಕೊಂಡಿದೆ. ಈ ಪಟ್ಟಣದಿಂದ ಸುಮಾರು 10 ಕಿ.ಮಿ.ದೂರದಲ್ಲಿರುವ ಕುಡಚಿಯಲ್ಲಿ ಶಿಲಾ–ತಾಮ್ರಯುಗ ಸಂಸ್ಕೃತಿಯ ನೆಲೆ ದೊರಕಿವೆ. ಈ ಪಟ್ಟಣದ ಪಶ್ಚಿಮಕ್ಕಿರುವ ಬೂದಿಹಾಳ ಗ್ರಾಮದಲ್ಲಿ ಬೃಹತ್ ಶಿಲಾಯುಗದ ಗೋರಿಗಳು ಕಂಡು ಬಂದಿವೆ. ಆದರೆ ಈ ಪಟ್ಟಣದಲ್ಲಿ ಆದಿ ಶಿಲಾಯುಗ, ಮಧ್ಯ ಹಳೇ ಶಿಲಾಯುಗ, ನೂತನ ಶಿಲಾಯುಗ, ಕಬ್ಬಿಣಯುಗ ಬೃಹತ್ ಶಿಲಾ ಸಂಸ್ಕೃತಿ ಆದಿ ಇತಿಹಾಸ ಸಂಸ್ಕೃತಿಯ ಯಾವ ಪುರಾವೆಗಳು ದೊರಕುವದಿಲ್ಲ. ಕೂಹುಂಡಿ ನಾಡಿನ ಆಡಳಿತ ವಿಭಾಗಗಳಲ್ಲಿಯೇ ಪ್ರಮುಖ ಆಡಳಿತ ಕೇಂದ್ರವಾಗಿದ್ದ ರಾಯಬಾಗನ್ನು ಬದಾಮಿ ಚಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಮಾಂಡಳೀಕರಾಗಿ ನಂತರ ಸ್ವತಂತ್ರವಾಗಿ ಆಳಿದ ಸವದತ್ತಿ ರಟ್ಟರು, ಶಿಲಾಹಾರರು, ದೇವಗಿರಿಯ ಸೇವುಣರು, ಬಿಜಾಪೂರದ ಆದಿಲ್‌ಶಾಹಿಗಳು, ಮರಾಠಾ ಪೇಶ್ವೇಗಳು, ಮೊಗಲ್‌ರು ನಂತರ ಬ್ರಿಟಿಷ್‌ರು ಆಡಳಿತಕ್ಕೊಳಪಟ್ಟಿತ್ತು.

ಪ್ರಸ್ತುತ ಲೇಖನದಲ್ಲಿ ಶಾಸನಗಳನ್ನು ವಿಷಯ ವಸ್ತುವಾಗಿರಿಸಿಕೊಳ್ಳಲಾಗಿದೆ. ಶಾಸನಗಳ ಆಧಾರದ ಮೇಲೆ ನೋಡುವುದಾದರೆ, ರಾಯಬಾಗದ ಇತಿಹಾಸ ಪ್ರಾರಂಭಗೊಳ್ಳುವದು ಕಲ್ಯಾಣಿ ಚಾಲುಕ್ಯ ಅರಸ ಮೊದಲನೆಯ ಜಯಸಿಂಹನ 1041ರ (ಶಕ 963, ವಿಕ್ರಮ ಸಂವತ್ಸರ, ಚೈತ್ರ ಬಹುಳ 14 ಶುಕ್ರವಾರ) ಶಾಸನದಿಂದ. ಇದು ಈ ಪಟ್ಟಣದ ಪ್ರಾಚೀನ ಶಾಸನವಾಗಿದೆ. ಈ ಶಾಸನದ ಅಕ್ಷರಗಳು ಸವೆದಿರುವುದರಿಂದ ವಿಷಯ ಸ್ಪಷ್ಟವಾಗುವದಿಲ್ಲ. ಜಯಸಿಂಹನ ಆಳ್ವಿಕೆಯ ಕಾಲದಲ್ಲಿ ಬಸದಿಯೊಂದಕ್ಕೆ ದಾನ ನೀಡಿದ ವಿವರಗಳಿದ್ದಂತೆ ತೋರುತ್ತದೆ.

ಕ್ರಿ.ಶ. 1077ರಲ್ಲಿ ರಾಯಬಾಗದ ವೀರಗಲ್ಲು ಶಾಸನ ದೊರಕಿದೆ. ಆದು ಕಲ್ಯಾಣಿ ಚಾಲುಕ್ಯ ಮನೆತನದ ತ್ರಿಭುವನಮಲ್ಲದೇವನು(ಆರನೆಯ ವಿಕ್ರಮಾದಿತ್ಯ) ಮಾಳವ ಪ್ರಾಂತ್ಯದ ಮೇಲೆ ದಾಳಿ ಮಾಡಿ ಅದರಲ್ಲಿ ವಿಜಯಶಾಲಿಯಾಗಿ ಪಾರಮಾರರ ರಾಜ ಉದಯನನ್ನು ಸೋಲಿಸಿ ರಾಜಧಾನಿ ಧಾರಾನಗರವನ್ನು ಸುಟ್ಟು ಅಲ್ಲಿ ವಿಜಯಸ್ಥಂಭವನ್ನು ಸ್ಥಾಪಿಸಿ ಮರಳಿ ಬರುತ್ತಾನೆ. ಆ ಸಂದರ್ಭದಲ್ಲಿ ಭಾವನಂಕಕಾರ ಪದ್ಮಲದೇವಿಯ ನಿಜಗಂಧವಾರಣನೂ (ಪದ್ಮಲದೇ ವಿಯ ಸಹೋದರ), ಮಹಾಮಂಡಳೇಶ್ವರರನೂ ಆದ ಕೊಂಗರಸನಿಗೂ ಮಾಂಡಲಿಕ ಭೋಜನಿಗೂ ಯುದ್ಧ ನಡೆದು ಕೊಂಗರಸನ ಅಧಿಕಾರಿ ಚಂಡರಸನು ಭೋಜನ ಆನೆಯನ್ನು ಸೆದೆಬಡಿದು ಪಾಳಿಮೊಗವನ್ನು ಕಿತ್ತು ಅನೇಕ ಹೆಸರಾಂತ ನಾಯಕರನ್ನು ಕೊಂದು ತಾನೂ ವೀರ ಮರಣಹೊಂದಿದ ವಿಷಯವನ್ನು ಪ್ರಾಸ್ತಾಪಿಸಿದೆ.

ಕ್ರಿ.ಶ. 1127ರ ಕಲ್ಯಾಣಿ ಚಾಲುಕ್ಯರ ಕಾಲದ ಶಾಸನ (ಅರಸ ಮತ್ತು ಅಧಿಕಾರಿಯ ಹೆಸರು ಇಲ್ಲ.) (ತೃಟಿತ) ಇದೆ. ಇದು ದಾನ ಶಾಸನವಾಗಿದೆ. ಅದರಂತೆ ಕ್ರಿ.ಶ. 1139 ರ ಕಲ್ಯಾಣಿ ಚಾಲುಕ್ಯ ಅರಸ ಎರಡನೆಯ ಜಗದೇಕಮಲ್ಲನ ಶಾಸನವಿದೆ.[4] ವಿದೆ. ಇದರಲ್ಲಿ ಇವನ ದಂಡನಾಯಕನಾದ ಕಾಳಿಮರಸ ಮತ್ತು ಇವನ ಹೆಂಡತಿ ರೇಕಲದೇವಿಯ ತಮ್ಮನಾದ ದಾಸಿರಾಜನ ಉಲ್ಲೇಖವಿದೆ. ದಂಡನಾಯಕ ಕಾಳಿಮರಸನನ್ನು ಶಾಸನದಲ್ಲಿ "ಬಾಹತ್ತರ ನಿಯೋಗಾಧಿಪತಿ ರಾಯಪಿತಾಮಹ ಮಂತ್ರಿಚೂಡಾಮಣಿ ನಾಮಧೇಯ ಶ್ರೀಮನ್ಮಹಾಪ್ರಧಾನಂ ಪಿರಿಯದಂಡನಾಯಕಂ ಕಾಳಿಮರಸರವಳಿಯಂ" ಎಂದು ಕರೆಯಲಾಗಿದೆ. ಈ ಶಾಸನದಲ್ಲಿ ರಾಯಬಾಗನ್ನು "ಹೂವಿನ ಬಾಗಿ" ಎಂದು ಉಲ್ಲೇಖಗೊಂಡಿದೆ.

ಕ್ರಿ. ಶ. 12ನೇ ಶತಮಾನದ ಸವದತ್ತಿ ರಟ್ಟರ ನಾಲ್ಕನೆಯ ಕಾತ್ಯವೀರ್ಯನ ಶಾಸನ (1199–1228) ದಲ್ಲಿ ಮಹಾಮಂಡಳೇಶ್ವರ ಕಾರ್ತ್ಯವೀರ್ಯನು ವೇಣುಗ್ರಾಮ ನೆಲೆವೀಡಿನಿಂದ ಆಳುತ್ತಿದ್ದಾಗ ಆತನ ಅಧಿಕಾರಿ ಕಂಕನೂರಿನ ಪ್ರಭು ಬಾಚರಸ ಮತ್ತು ಅವನ ಹೆಂಡತಿ ಪರಸಿಯವ್ವೆಯರ ಮಗ ಶ್ರೀಕಾಂತ ಹೆಮ್ಮಣಯ್ಯ ಅತ್ಯಂತ ಪರಾಕ್ರಮಿಯಾಗಿದ್ದನ್ನು ಮತ್ತು ರಟ್ಟ ರಾಜ್ಯದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಚಾವುಂಡರಾಯನನ್ನು ಶಾಸನ ಉಲ್ಲೇಖಿಸಿದೆ. ಮುಂದುವರೆದು ಕನ್ನಡ ವಂಶದ ಶಾಂಡಿಲ್ಯಗೋತ್ರದ ಮಾದಿರಾಜ ದಂಡಾಧೀಶನಿಗೆ ಕುರಂಬೆಟ್ಟ ಕಂಪಣದ ಕಂಕನೂರಿನ (ಇಂದಿನ ಕಂಕನವಾಡಿ) ಪ್ರಭುತ್ವವನ್ನು ಧಾರಾಪೂರ್ವಕವಾಗಿ ನೀಡಿದ್ದನ್ನು ತಿಳಿಸುತ್ತದೆ. ಸವದತ್ತಿ ರಟ್ಟರ ಕಾಲದಲ್ಲಿ ರಾಯಬಾಗ ಕೂಹುಂಡಿ–3000 ನಾಡಿನ ಆಡಳಿತದ ಉಪ ವಿಭಾಗವಾಗಿತ್ತು. ಕ್ರಿ.ಶ. 1202ರ ಶಾಸನವೊಂದು ಕೊಂಡಿ–3000 ಆಡಳಿತ ವಿಭಾಗವನ್ನು ರಟ್ಟರ ನಾಲ್ಕನೆಯ ಕಾರ್ತ್ಯವೀರ್ಯನು ಆಳುತ್ತಿದ್ದುದನ್ನು ತಿಳಿಸುತ್ತದೆ.

ಪ್ರಸ್ತುತ ಗ್ರಾಮದ ಶೆಟ್ಟಿಗಲ್ಲಿಯಲ್ಲಿರುವ ತೀರ್ಥಂಕರನ ಪಾದ ಪೀಠದ ಮೇಲಿರುವ ಕಲ್ಯಾಣಿ ಚಾಲುಕ್ಯ ಆರನೆಯ ವಿಕ್ರಮಾದಿತ್ಯನಿಗೆ ಸಂಬಂಧಿಸಿದ ಅಸ್ಪಷ್ಟ ಅಪ್ರಕಟಿತ ಶಾಸನವಿದೆ. ಇತ್ತಿಚೇಗೆ ಆಧಿನಾಥ ಜಿನಾಲಯದಲ್ಲಿ ನೂತನವಾಗಿ ದೊರೆತಿರುವ ವೀರಗಲ್ಲು ಕಲ್ಯಾಣಿ ಚಾಲುಕ್ಯರ ಕಾಲದ್ದಾಗಿದೆ ? ಇದರ ಶಿಲ್ಪ ಲಕ್ಷಣದಿಂದ ಇದು 12–13ನೆಯ ಶತಮಾನಕ್ಕೆ ಸೇರಿದ್ದಂದು ತಿಳಿಯುತ್ತದೆ. ಜಹಂಗೀರನ ಕಾಲದಲ್ಲಿ ರಾಯಬಾಗ ಮೊಘಲ್ ಬಾದಶಹರ ಆಳ್ವಿಕೆಗೆ ಒಳಪಟ್ಟಿತ್ತು ಬಾದಶಹ ಜಹಂಗೀರನ ಕ್ರಿ.ಶ. 1597ರ ಶಾಸನ ರಾಯಬಾಗದಲ್ಲಿ ದೊರಕಿದೆ.[7] ಕ್ರಿ.ಶ. 1229ರ ವೇಳೆಗೆ ರಾಯಬಾಗ ಬಿಜಾಪೂರದ

ಆದಿಲ್‌ಶಾಹಿಗಳ ಆಳ್ವಿಕೆಗೆ ಒಳಪಟ್ಟಿತ್ತು. ಇಲ್ಲಿನ ಜಾಮೀಯಾ ಮಸೀದಿಯಲ್ಲಿರುವ ಶಾಸನ ಇದನ್ನು ದೃಡಪಡಿಸುತ್ತದೆ. ಇಲ್ಲಿನ ಜಾಮೀಯ ಮಸೀದಿಯನ್ನು ಬಿಜಾಪೂರದ ಆದಿಲ್‌ಶಾಹಿ ಸರದಾರ ಅಮೀನ ಮುಸ್ತಫಖಾನ ಈ ಮಸೀದಿಯನ್ನು ಕಟ್ಟಿಸಿದ ವಿವರಣೆಯ ಅರೇಬಿಕ್ ಶಾಸನ ಸಿಗುತ್ತದೆ.

**ಸಾರಾಂಶ**

ರಾಯಬಾಗ ಪ್ರಾಚೀನ ಕಾಲದಿಂದಲೂ ಐತಿಹಾಸಿಕವಾಗಿ ಮಹತ್ವವನ್ನು ಪಡೆದುಕೊಂಡಿದೆ. ಬದಾಮಿ ಚಲುಕ್ಯರ, ರಾಷ್ಟ್ರಕೂಟರ, ಕಾಲ್ಯಾಣಿ ಚಾಲುಕ್ಯರ, ಸುಗಂಧವರ್ತಿ (ಇಂದಿನ ಸವದತ್ತಿ) ರಟ್ಟರ, ಕಲ್ಯಾಣದ ಕಲಚೂರಿ, ವಿಜಾಪೂರದ ಆದಿಲ್‌ಶಾಹಿಗಳ, ವಿಜಯನಗರದ ಅರಸರ, ಮರಾಠರ ನಂತರ ಬ್ರಿಟಿಷ್‌ರ ಆಡಳಿತಕ್ಕೊಳಟ್ಟಿತ್ತು. ಇದೆಲ್ಲವನ್ನು ಈ ಪಟ್ಟಣಕ್ಕೆ ಸಂಬಂಧಿಸಿದ ಶಾಸನಗಳು ದೃಡಪಡಿಸಿವೆ. ಕೂಹುಂಡಿ–3000 ನಾಡಿನ ಪ್ರಮುಖ ಆಡಳಿತ ವಿಭಾಗಗಳಲ್ಲಿ ಒಂದಾದ ಈ ಪಟ್ಟಣವು ಇಂದು ತಾಲೂಕು ಕೇಂದ್ರವಾಗಿದೆ. ಪ್ರಸ್ತುತ ರಾಯಬಾಗದಲ್ಲಿ ದೊರಕಿದ ಶಾಸನಗಳ ಆಧಾರದ ಹಿನ್ನಲೆಯಲ್ಲಿ ರಾಯಬಾಗ ಪಟ್ಟಣದ ಐತಿಹಾಸಿಕ ಇತಿಹಾಸವನ್ನು ಅಲ್ಲಿನ ಜನ ಜೀವನ ವ್ಯವಸ್ಥೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

**ಆಧಾರ ಗ್ರಂಥಗಳು**


1. ಕೊಪ್ಪಾ ಎಸ್.ಕೆ., "ತರ್ದವಾಡಿ ನಾಡು", ಪ್ರತಿಭಾ ಪ್ರಕಾಶನ, ಇಂಡಿ. ಪು–15.)
2. ಮರಿಯಪ್ಪಭಟ್ಟ ಎಂ. (ಸಂ.), ರಾಜಾದಿತ್ಯನ ವ್ಯವಹಾರಗಣಿತ (1955), ಮುನ್ನುಡಿ, ಪು. 2.
3. ಎ.ಆರ್.ಆಯ್.ಇ.1956–57, ಅಪೆಂಡೆಕ್ಸ ಬಿ.155)
4. ಪ್ರಸ್ತುತ ಕೊಲ್ಲಾಪೂರ ನಗರದ ಲಕ್ಷ್ಮೀವಿಲಾಸ ಅರಮನೆಯ ವಸ್ತು ಸಂಗ್ರಹಾಲಯದ ಆವರಣದಲ್ಲಿದೆ.) (Inscriptions in Northern Karnataka & Kolhapur State)
5. ಇದು ಪ್ರಸ್ತುತ ಕೊಲ್ಲಾಪೂರ ನಗರದ ಇರ್ವಿಂಗ ಅಗ್ರಿಕಲ್ಚರ ಮ್ಯೂಸಿಯಂನಲ್ಲಿದೆ.) (Inscriptions in Northern Karnataka & Kolhapur State)
6. ಎ.ಆರ್.ಆಯ್.ಇ. 1956–57)
7. ಎ.ಆರ್.ಆಯ್.ಇ. 1956–57)
8. ಗೋಪಾಲ್ ಆರ್. (ಸಂ.), ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (2010), ಪ್ರಾಚ್ಯವಸ್ತು ಮತುಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು.
9. ಕಲಬುರ್ಗಿ ಎಂ.ಎಂ. (ಸಂ.), ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ–1 (1999), ಪು. 8.